ನೀರಾವರಿಗೂ ಬಹಳ ವ್ಯತ್ಯಾಸವಿದೆ. ಅದಕ್ಕೆ ನಾವೇ ಮಂಜೂರು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ನಾವು ಲಕ್ಷ ರೂಪಾಯಿ ಏನು ಖರ್ಚು ಮಾಡುತ್ತೇವೆ, ಆ ಹಣಕ್ಕೂ ಈ ನೀರಾವರಿಗೂ ಸಮತೋಲನೆ ಆಗುವುದಿಲ್ಲ. ರಸ್ತೆಗೂ ನಾವು ಹಣ ಖರ್ಚು ಮಾಡುತ್ತೇವೆ. ಈ ರಸ್ತೆಯ ಸದುಪಯೋಗ ಸಮಾಜಕ್ಕೆ, ಜನರಿಗೆ ಆಗುತ್ತದೆನ್ನುವ ಕಾರಣದಿಂದ ಇದನ್ನು ಮಾಡಿಕೊಡಿ ಎನ್ನುವ ಒತ್ತಾಯವನ್ನು ನಾವು ತರುತ್ತಿದ್ದೇವೆ. ಅವರಿಂದ ತಾಂತ್ರಿಕ ಸಲಹೆ ಸಿಕ್ಕ ತಕ್ಷಣ ನಾವು ಇದಕ್ಕೆ ಆದ್ಯತೆ ಕೊಟ್ಟು ಮಾಡಿಕೊಡುತ್ತೇವೆ.

ಶ್ರೀ ಯು.ಬಿ.ಬಣಕಾರ್: ಸುಮಾರು ವರ್ಷಗಳಿಂದ ಇದು ಆ ಸಮಿತಿ ಮುಂದಿದೆ. ದಯವಿಟ್ಟು ಬೇಗನೆ ಇತ್ಯರ್ಥಗೊಳಿಸಿ. ಇದು ಕೇವಲ ಬಾಂದಾರದ ಪ್ರಶ್ನೆಯಲ್ಲ. ರಟ್ಟಿಹಳ್ಳಿ ಏತ ನೀರಾವರಿ ಯೋಜನೆಗೆ ಬಾಂದಾರ ಕಟ್ಟುವುದರಿಂದ ಅನುಕೂಲವಿದೆ. ರಟ್ಟೀಹಳ್ಳಿ ಏತ ನೀರಾವರಿ ಯೋಜನೆಗೆ ತೊಂದರೆ ಬರುತ್ತಿದೆ. ಮಳಿಗೆ ಗ್ರಾಮಸ್ಥರಿಗೆ ಈ ದಾರಿ ಬಿಟ್ಟರೆ ಬೇರೆ ದಾರಿಯಿಲ್ಲ. ಆದ್ದರಿಂದ, ತಾವು ಬಾಂದಾರ ಕಟ್ಟುವಾಗ ಚಕ್ಕಿ ಅದರ ಮೇಲೆ ಹೋಗಲಿಕ್ಕೆ ಏನಾದರೂ ಮಾಡಿ ಈ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಪುನಃ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ: ನಿಮ್ಮ ಸಲಹೆ ಉತ್ತಮವಾಗಿದೆ. ಅದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಹೊಸದಾಗಿ ರಚಿಸಲ್ಪಟ್ಟ ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳನ್ನು, ತೆರೆಯುವುದು.

7 (4)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ, ರಚಿಸಲ್ಪಟ್ಟ ಗದಗ್ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳನ್ನು ಎಂದು ಪ್ರಾರಂಭಿಸಲಾಗುವುದು? ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಆ) ಮುಂದಿನ ಹಣಕಾಸು ವರ್ಷದಿಂದ ಹೊಸ ಜಿಲ್ಲೆಗಳಿಗೆ ಯೋಜನೆ ಹಾಗೂ ಯೋಜನೇತರ ವೆಚ್ಚಗಳಿಗೆ ಪ್ರತ್ಯೇಕ ಅನುದಾನ ಒದಗಿಸಲಾಗುವುದೇ?

ಇ) ಸರ್ಕಾರ ಈ ಮೊದಲು ನೀಡಿದ ಭರವಸೆಯಂತೆ ಏಪ್ರಿಲ್ ಒಂದನೇ ದಿನಾಂಕದಿಂದ ಹೊಸ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲೆಯ ಎಲ್ಲಾ ಕಛೇರಿಗಳನ್ನು ಪ್ರಾರಂಭಿಸಲಾಗುವುದೇ?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಜಿಲ್ಲಾಧಿಕಾರಿಗಳು, ಸೂಪರಿಂಟೆಂಡ್ ಆಫ್ ಪೊಲೀಸ್ ಇಲಾಖೆಯ ಕಛೇರಿಗಳನ್ನು ಈಗಾಗಲೇ ತೆರೆಯಲಾಗಿದೆ. ಉಳಿದ ಜಿಲ್ಲಾ ಮಟ್ಟದ ಕಛೇರಿಗಳನ್ನು ಹಂತ ಹಂತವಾಗಿ ತೆರೆಯಲಾಗುವುದು.

ಆ) ಹೌದು.

ಇ) ಪ್ರಶ್ನೆ 'ಅ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಡಿ.ಆರ್.ಪಾಟೀಲ್: ನನಗೆ ಕೊಟ್ಟ ಉತ್ತರದಲ್ಲಿ ಜಿಲ್ಲೆಯಲ್ಲಿ ಉಳಿದ ಕಛೇರಿಗಳನ್ನು ಹಂತ ಹಂತವಾಗಿ ತೆರೆಯಲಾಗುವುದು ಎಂದು ಹೇಳಿದ್ದಾರೆ. ಹಂತ ಹಂತವಾಗಿ ಎಂದರೆ ಎಷ್ಟು ತಿಂಗಳು? ಎಷ್ಟು ವರ್ಷ? ಟೈಂ ಫ್ರೇಂ ಗೊತ್ತಾಗಲಿಲ್ಲ. ಧಾರವಾಡ ಜಿಲ್ಲೆಯಲ್ಲಿ ಮೂರು ಸೆಷನ್ಸ್ ನ್ಯಾಯಾಲಯಗಳಿವೆ. ಇದರಲ್ಲಿ ಒಂದನ್ನು ಇಮ್ಮಿಡಿಯೇಟ್ ಆಗಿ ಷಿಫ್ಟ್ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಅದನ್ನು ಆದಷ್ಟು ಕೂಡಲೇ ಮಾಡುತ್ತೀರೋ, ಅಥವಾ ಇಲ್ಲವೋ? ಆಮೇಲೆ ಅಲ್ಲಿ ಜಿಲ್ಲಾ ಪಂಚಾಯತ್ ಯಾವಾಗ ಅಸ್ತಿತ್ವಕ್ಕೆ ಬರುತ್ತದೆ?

ಶ್ರೀ ಬಿ.ಎನ್.ಬಚ್ಚೇಗೌಡ: ರಾಜ್ಯದಲ್ಲಿ 19 ಜಿಲ್ಲೆಗಳಿದ್ದು, 20ನೇ ಜಿಲ್ಲೆಯಾಗಿ 1986ರಲ್ಲಿ ಬೆಂಗಳೂರು ನಗರ ಜಿಲ್ಲೆ ಬಂತು ಮತ್ತು 1997ರಲ್ಲಿ ನಮ್ಮ ಮುಖ್ಯಮಂತ್ರಿಗಳು 7 ಜಿಲ್ಲೆಗಳನ್ನು ಹೊಸದಾಗಿ ರಚಿಸಿದ್ದರಿಂದ 27 ಜಿಲ್ಲೆಗಳಾಗಿವೆ. ಇದರಲ್ಲಿ ಚಾಮರಾಜನಗರ, ದಾವಣಗೆರೆ, ಬಾಗಲಕೋಟೆ ಜಿಲ್ಲೆಗಳು ದಿ: 15.8.97ರಿಂದ ಕೆಲಸ ನಿರ್ವಹಿಸುತ್ತಿವೆ. ಗದಗ, ಹಾವೇರಿ, ಕೊಪ್ಪಳ ಜಿಲ್ಲೆಗಳು ದಿ: 24.8.97ರಿಂದ ಕಾರ್ಯ ನಿರ್ವಹಿಸುತ್ತಿವೆ. ಉಡುಪಿ ಜಿಲ್ಲೆ ದಿ:25.8.97ರಿಂದ ಅಸ್ತಿತ್ವಕ್ಕೆ ಬಂದು ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ.ಯವರು ಅಧಿಕಾರ ವಹಿಸಿಕೊಂಡಿದ್ದಾರೆ. ಇದು ಮಧ್ಯದಲ್ಲಾದ್ದರಿಂದ ಪ್ಲಾನ್ ಅಮೌಂಟ್ ಕೊಡುವುದು ಸ್ವಲ್ಪ ತಡವಾಗಿದೆ. ನಾವು 1998-99ನೇ ಸಾಲಿಗಾಗಿ ಪ್ಲಾನ್ ಅಮೌಂಟ್ ಮತ್ತು ಏನೇನು ಸೇರಬೇಕೋ ಅದೆಲ್ಲವನ್ನೂ ಕೊಡುತ್ತಿದ್ದೇವೆ. ಮತ್ತೆ ಆಡಳಿತದ ದೃಷ್ಟಿಯಿಂದ ಇತರೆ ಖರ್ಚುಗಳಿಗೆ ಮತ್ತು ಜಿಲ್ಲಾ ಕಛೇರಿಗೆ 39 ಲಕ್ಷ ರೂಪಾಯಿಗಳನ್ನು ಈಗ ನಾವು ಕೊಟ್ಟಿದ್ದೇವೆ. ನಾವು ತಿಳಿಸಿದ ಹಾಗೆ ಅಲ್ಲಿ ಈಗ 1.4.98ರಿಂದ 1999ಕ್ಕೆ ಅಭಿವೃದ್ಧಿ ಇಲಾಖೆ, ರೂರಲ್ ಡೆವಲಪ್‌ಮೆಂಟ್ ನಮ್ಮ ಜಿಲ್ಲಾ ಪಂಚಾಯತ್‌ಗಳು ಆಯಾಯ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಮತ್ತೆ, ತಾವು ಹೇಳುವಂತೆ ಮುದ್ರಾಂಕ ಮತ್ತು ನೋಂದಣಿ ಇಲಾಖೆಗೂ ಭೂ ಮಾಪನ ಇಲಾಖೆ, ಆಹಾರ ಇಲಾಖೆ ಬೇರೆ ಬೇರೆ ಇಲಾಖೆಗಳಲ್ಲಿ ಬರುವಂಥಾದ್ದು. ಇದರಲ್ಲಿ ಚೀಫ್ ಸೆಕ್ರೆಟರಿಯವರ ನೇತೃತ್ವದಲ್ಲಿ ಅಧಿಕಾರಿಗಳನ್ನು ಎಲ್ಲೆಲ್ಲ ಕಳುಹಿಸಬೇಕು, ಏನು ಮಾಡಬೇಕೆಂಬುದರ ಬಗ್ಗೆ ನಿರ್ಬಂಧವಿದ್ದದ್ದರಿಂದ ಈ

ಏಪ್ರಿಲ್ ನಂತರ ಅಧಿಕಾರಿಗಳನ್ನು ನೇಮಿಸುವಂತಹ ವ್ಯವಸ್ಥೆಯಾಗುತ್ತದೆ. ಸೂಪರಿಂಟೆಂಡೆಂಟ್ ಇರಬಹುದು, ಎಫ್.ಡಿ.ಎ, ಎಸ್.ಡಿ.ಎ ಇರಬಹುದು, ಯಾರನ್ನು ಎಲ್ಲೆಲ್ಲಿ ನೇಮಿಸಬೇಕೆನ್ನುವುದನ್ನು ಪರಿಶೀಲಿಸಿ, ಆಯಾಯ ಇಲಾಖೆಯವರನ್ನು ಬೇರ್ಪಡಿಸುವಂಥದ್ದನ್ನು ಮಾಡುತ್ತೇವೆ. ತಾವು ಸೆಷನ್ಸ್ ನ್ಯಾಯಾಲಯ ಬೇಕೆಂದು ಕೇಳಿದ್ದೀರಿ, ಅಲ್ಲಿ ಸೆಷನ್ಸ್ ನ್ಯಾಯಾಲಯ ತೆರೆಯುವಂತಹ ವ್ಯವಸ್ಥೆಯಾಗುತ್ತದೆ ಮತ್ತು ಕಟ್ಟಡ ಬೇಕೆಂದು ಕೇಳಿದ್ದೀರಿ ಅದಕ್ಕೆ 1998-99ನೇ ಸಾಲಿನಲ್ಲಿ ಪ್ಲಾನ್ ಅಮೌಂಟ್‌ನಲ್ಲಿ 7 ಕೋಟಿ ಫಿಕ್ಸೆಡ್ ಹಣವನ್ನು ಕೊಟ್ಟಿದ್ದೇವೆ. ಅದು ಪ್ರತಿ ಜಿಲ್ಲೆಗಲ್ಲ ಟೋಟಲ್ 7 ಜಿಲ್ಲೆಗಳಿಗೆ. ತಮ್ಮ ಎ.ಪಿ.ಎಂ.ಸಿ.ಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೇರೆ ಬೇರೆ ಕಡೆ, ಬೇರೆ ಬೇರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವರಿಗೆ ಬೇಕಾದ ಕಟ್ಟಡ ಕಟ್ಟಿಕೊಡುವಂಥಾದ್ದಕ್ಕೆ ಇವತ್ತು 7 ಕೋಟಿ ರೂ.ಗಳ ಹಣವನ್ನು 1998-99ನೇ ಸಾಲಿನಲ್ಲಿ ನಿಗದಿ ಮಾಡಿದೆ. ತಾವು ಹಂತ ಹಂತವಾಗಿ ಎಂದು ಹೇಳಿದ್ದರಿಂದ, ಹೊಸ ಜಿಲ್ಲೆಗಳು ಒಂದೇ ಸಾರಿ ಸಂಪೂರ್ಣವಾಗಿ ಕಾರ್ಯ ನಿರ್ವಹಿಸಲು ಆಗಲಾರದು. ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಆ ದೃಷ್ಟಿಯಿಂದ ಆ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಡಿ.ಆರ್.ಪಾಟೀಲ್: ಹಂತ ಹಂತವಾಗಿ ಎಂದರೆ, what is the time frame?

MR. SPEAKER: The Hon'ble Minister did answer it. You are a very alert Member and I don't know how you did not catch the point. ಏಪ್ರಿಲ್‌ನಿಂದ ಕಮೆನ್ಸ್ ಆಗುತ್ತದೆಂದು ಅವರು ಹೇಳಿದರು.

ಶ್ರೀ ಬಿ.ಎನ್.ಬಚ್ಚೇಗೌಡ: ಇದರಲ್ಲೇನಾಗುತ್ತದೆಂದರೆ, ಹೊಸ ಜಿಲ್ಲೆಗಳ ಮರು ಹೊಂದಾಣಿಕೆಯಾಗಬೇಕಾಗುತ್ತದೆ, ವಾಹನಗಳ ಖರೀದಿಯಾಗಬೇಕಾಗುತ್ತದೆ. ಇರುವ ವಾಹನಗಳನ್ನು ಆ ಕಡೆ ಕೊಡಬೇಕಾಗುತ್ತದೆ. ವರ್ಗಾವಣೆ ಮಾರ್ಗಸೂಚಿ ಇದೆ. ಅಲ್ಲಿಗೆ ಅಧಿಕಾರಿಗಳನ್ನು ನೇಮಿಸಬೇಕಾಗುತ್ತದೆ.

ಅಧ್ಯಕ್ಷರು: ತಾವು ಸರಿಯಾಗಿ ಹೇಳಿದ್ದೀರಿ.

ಶ್ರೀ ಡಿ.ಆರ್.ಪಾಟೀಲ್: ನೀವು ಆಗಸ್ಟ್‌ನಲ್ಲಿ ಪ್ರಾರಂಭ ಮಾಡಿದ ಜಿಲ್ಲೆಗಳಲ್ಲಿ ಏಪ್ರಿಲ್ 1ರಿಂದ ಎಲ್ಲಾ ಜಿಲ್ಲಾ ಕಛೇರಿಗಳನ್ನೂ ಪ್ರಾರಂಭಿಸುತ್ತೇವೆಂದು ಮುಖ್ಯಮಂತ್ರಿಗಳು ನಮಗೆ ಭರವಸೆ ಕೊಟ್ಟಿದ್ದರು. ಜಿಲ್ಲಾ ಪಂಚಾಯತ್ ಸಹಿತ ಏಪ್ರಿಲ್ ಒಂದರಿಂದ ಅಸ್ತಿತ್ವಕ್ಕೆ ಕಾನೂನನ್ನು ಅಮೆಂಡ್‌ಮೆಂಟ್ ಮಾಡಿ ಜಿಲ್ಲಾ ಪಂಚಾಯತ್ ಬೈಫರ್‌ಕೇಷನ್ ಹೇಗೆ ಮಾಡಬೇಕೆಂಬುದನ್ನೂ ಸಹ ನಾವು ಪಾಸ್ ಮಾಡಿದ್ದೆವು ಏಪ್ರಿಲ್ ಒಂದರಿಂದ ಮಾಡುವ ಕುರಿತು ನೀವು ಯಾವ

ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಅದನ್ನು ಏಪ್ರಿಲ್ 1ರಿಂದ 3 ತಿಂಗಳೊಳಗಾಗಿ ಮಾಡುತ್ತೀರೋ?

ಅಧ್ಯಕ್ಷರು: ನೀವು 3ತಿಂಗಳು ಅಡಿಷನಲ್ಲಾಗಿ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಕಳೆದ 3 ತಿಂಗಳು ಎಲ್ಲಾ ಮೆಷನರೀಸ್ ಎಲೆಕ್ಷನ್‌ನಲ್ಲಿ ಇನ್‌ವಾಲ್ವ್ ಆಗಿತ್ತು. ಅವರು 6 ತಿಂಗಳ ಸಮಯದಲ್ಲಿ ರಫ್ ಆಗಿ ಮಾಡುತ್ತಾರೆ.

ಶ್ರೀ ಡಿ.ಆರ್.ಪಾಟೀಲ್: 3 ತಿಂಗಳಲ್ಲಿ ಮಾಡುತ್ತೇವೆಂದು ಸರ್ಕಾರದವರು ಉತ್ತರ ಕೊಡಲಿ.

ಶ್ರೀ ಬಿ.ಎನ್.ಬಚ್ಚೇಗೌಡ: ಕಳೆದ 3 ತಿಂಗಳಲ್ಲಿ ಚುನಾವಣೆ ನೀತಿ ಸಂಹಿತೆ ಇದರಲ್ಲೇ ಇದ್ದೆವು. 3 ತಿಂಗಳಲ್ಲಿ ಇದಕ್ಕೆ ಬೇಕಾದ ವಿಧಿ-ವಿಧಾನಗಳನ್ನು ಸರಿಪಡಿಸಿಕೊಂಡು ಮಾಡಬೇಕಾಗುತ್ತದೆ, ಮಾಡುತ್ತೇವೆ.

ಶ್ರೀ ಡಿ.ಆರ್.ಪಾಟೀಲ್: ಜೂನ್ 30ರೊಳಗೆ ಎಲ್ಲಾ ಜಿಲ್ಲಾ ಕಛೇರಿಗಳನ್ನೂ ಪ್ರಾರಂಭಿಸುತ್ತೀರಾ?

ಶ್ರೀ ಬಿ.ಎಸ್.ಬಚ್ಚೇಗೌಡ: ಎಲ್ಲಾ ಆಗುವುದಿಲ್ಲ.

ಅಧ್ಯಕ್ಷರು: ಪ್ರಯತ್ನ ಪಡುತ್ತೀರಲ್ಲವೇ?

ಶ್ರೀ ಡಿ.ಆರ್.ಪಾಟೀಲ್: ಮುಖ್ಯ ಮಂತ್ರಿಗಳು ನಮಗೆ ಭರವಸೆ ಕೊಡಬೆಕು.

ಅಧ್ಯಕ್ಷರು: ಜೂನ್ 30ರೊಳಗೆ ನೀವು ಸೂಚಿಸಿದ ಹಾಗೆ ಮಾಡುವುದಕ್ಕೆ ಪ್ರಯತ್ನಿಸುತ್ತಾರೆ.

ಶ್ರೀ ಡಿ.ಆರ್.ಪಾಟೀಲ್: ತಾವು ಹೊಸ ಜಿಲ್ಲೆ ರಚಿಸಿ ನಮಗೆಲ್ಲಾ ಸಾಕಷ್ಟು ಉಪಕಾರ ಮಾಡಿದ್ದೀರಿ. ಆದರೆ, ದಯವಿಟ್ಟು ಎಲ್ಲಾ ಕಛೇರಿಗಳನ್ನೂ ಬೇಗ ಪ್ರಾರಂಭವಾಗುವ ಹಾಗೆ ಮಾಡಬೇಕು.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಹೊಸ ಜಿಲ್ಲೆಗಳನ್ನು ನಾವು ರಚನೆ ಮಾಡುವಾಗ ಬಹುಮುಖ್ಯವಾದ ಒಂದು ಅಬ್ಜೆಕ್ಷನ್ ಏನಿತ್ತು ಎಂದರೆ ನಾವು ತಕ್ಷಣ ಇದಕ್ಕೆ ಹೆಚ್ಚು ದುಡ್ಡನ್ನು ಖರ್ಚು ಮಾಡಬಾರದು, ಇರತಕ್ಕ ಸಿಬ್ಬಂದಿಯನ್ನು ಆದಷ್ಟೂ ಹೊಂದಾಣಿಕೆ ಮಾಡಿಕೊಳ್ಳಿ ಎಂದು, ಮಾನ್ಯ ಪಾಟೀಲರಿಗೂ ಹೇಳಿದ್ದೇನೆ, ಈಗ ಹೆಚ್ಚು ಹಣ ಖರ್ಚಾಗಿಬಿಡ್ತು, ಇದನ್ನು ಮಾಡಬಾರದಾಗಿತ್ತು ಎಂದು ಹೇಳಿದವರೂ ಇದ್ದರು. ಆದರೆ ನೀವೆಲ್ಲಾ ನಮಗೆ ಸಪೋರ್ಟ್ ಕೊಟ್ಟಿರಿ, ಮಾಡಿದ್ದೇವೆ. ತಾವು ಸಹಿಸಿಕೊಳ್ಳಬೇಕು. ಈಗ ಮಾನ್ಯ ಬಚ್ಚೇಗೌಡರು ಹೇಳಿದ್ದು ಮಾಡುವುದಿಲ್ಲ

ಎಂದು ಅಲ್ಲ. ಈ ಮೂರು ತಿಂಗಳೆಲ್ಲಾ ನಾವು ಇದಕ್ಕೆ ಓಡಾಡಿದ್ದು ಆಯಿತು. ಈಗ ಏಪ್ರಿಲ್‌ಗೆ ಎಂದು ಹೇಳುವುದು ಕಷ್ಟ ಇದೆ. ಏಕೆಂದರೆ ಕನ್‌ಸಲ್ಟ್ ಮಾಡಿ ಆಕ್ಚುಯಲಿ ಪ್ರಾಕ್ಟಿಕಲ್ ಪ್ರಾಬ್ಲಂಸ್ ಏನಿವೆ, ಪೊಲಿಟಿಕಲ್ ಅಲ್ಲ, ಮೆಷಿನರ್, ಫೈನಾನ್ಸ್ ಸಮಸ್ಯೆಗಳು, ಇವುಗಳ ಬಗ್ಗೆ ನೋಡಿ ಮಾಡುತ್ತೇವೆ. ಇಷ್ಟೆಲ್ಲಾ ನಾವು ಮಾಡಿದ್ದೇವೆ ಇದಕ್ಕೆ ಏತಕ್ಕೆ ಇಷ್ಟು ಅವಸರ? ಹೇಗೂ ಮಾಡಿದ್ದೇವೆ.

MR. SPEAKER: An understanding is required bewteen you and him. The situation demands an understanding between you and him. Hon'ble Chief Minister, I hope I am right.

ಶ್ರೀ ಡಿ.ಆರ್.ಪಾಟೀಲ್: ಸಾರ್, ಲೋಕಸಭಾ ಚುನಾವಣೆ ಆದಮೇಲೆ.....

ಅಧ್ಯಕ್ಷರು: ಅದಕ್ಕೇ ನಾನು ಹೇಳಿದ್ದು. It is only because of that.

ಶ್ರೀ ಡಿ.ಆರ್.ಪಾಟೀಲ್: ಲೋಕಸಭಾ ಚುನಾವಣೆ ಆದಮೇಲೆ ನಾಳೆ ಏನಾಗುತ್ತದೆಯೋ ಎನ್ನುವ ಚಿಂತೆಯೆ ಇರುವುದರಿಂದ, ಪಟೇಲ್ ಸಾಹೇಬರು ಮುಖ್ಯಮಂತ್ರಿ ಇದ್ದಾಗ ನಮಗೆ ಎಲ್ಲಾ ಜಿಲ್ಲಾ ಕಛೇರಿಗಳು ಬರಲಿ ಎಂದು ಅಪೇಕ್ಷೆ. ಅದಕ್ಕೆ ಅದನ್ನು ಮಾಡುತ್ತೀರೋ ಇಲ್ಲವೋ ಎನ್ನುವ ಭರವಸೆ ಕೊಟ್ಟರೆ ಸಾಕು ನಮಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಲೋಕಸಭಾ ಚುನಾವಣೆಯಲ್ಲಿ ಜನತಾದಳ ಕಾಂಗ್ರೆಸ್ಸಿನವರ ಒಳ ಅಂಡರ್‌ಸ್ಟ್ಯಾಂಡಿಂಗ್ಸ್ ಬಗ್ಗೆ... ಈ ಪ್ರಶ್ನೆಗೆ ಉತ್ತರ ಅಲ್ಲ. ಅಧ್ಯಕ್ಷರು ಇನ್‌ಡೈರೆಕ್ಟಾಗಿ ಬಹುಶಃ ನಾನು ಅಂದುಕೊಂಡಿದ್ದೇನೆ, ನೀವು ಮತ್ತು ಜನತಾದಳ ಮತ್ತು ಕಾಂಗ್ರೆಸ್ಸಿನವರು ಕೊನೇ ಮೂರು ದಿವಸ ಹೊಂದಾಣಿಕೆ ಮಾಡಿಕೊಂಡರಲ್ಲಾ ಅದರ ಬಗ್ಗೆ ಪ್ರಸ್ತಾಪವೋ ಅಥವಾ ಜಿಲ್ಲೆಯಲ್ಲಿನ ಪರಿಹಾರ ಅನುಕೂಲಗಳನ್ನು ಮಾಡಿಕೊಡುವ ಬಗ್ಗೆ ಪ್ರಸ್ತಾಪವೋ ಎಂದು ಅನುಮಾನ ಬಂತು ನನಗೆ ಪಟೇಲರ ಹತ್ತಿರ. ಕೊನೇ ಮೂರು ದಿವಸದ್ದು 18 ರಿಂದ 21ರವರೆಗೆ ನಾನು ಹೇಳಿದ್ದು.

ಶ್ರೀ ಜೆ.ಹೆಚ್.ಪಟೇಲ್: ಈಗ ಯಾರು ಯಾರು ಯಾರ್ಯಾರ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ, ಈಗ ಏನು ಮಾಡಬೇಕಾಗುತ್ತದೆ, ಮುಂದೆ ಏನು ಮಾಡಬೇಕಾಗುತ್ತದೆ ಎಂಬ ಬಗ್ಗೆ ಸುಮಾರು ಒಂದು ಗಂಟೆ ನಾನು ಹೇಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಯಡಿಯೂರಪ್ಪನವರು ಸ್ವಲ್ಪ ಕಾಯಿರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೇ ಬೇಡಿ. ಆಯಿತಲ್ಲಾ. ಸಮರ್ಪಕವಾಗಿ ಉತ್ತರ

ಹೇಳಿದ್ದಾರಲ್ಲಾ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ಆಗಸ್ಟ್ 15ಕ್ಕೆ ನಮ್ಮ ಜಿಲ್ಲೆ ಉದ್ಘಾಟನೆಯಾಗಿದೆ. ಅಕ್ಟೋಬರ್ 25ಕ್ಕೆ ನಮ್ಮ ಜಿಲ್ಲಾಧಿಕಾರಿಗಳು ರಜೆ ಹೋದವರು ಮತ್ತೆ ಬರಲೇ ಇಲ್ಲ. ನಮ್ಮಲ್ಲಿ ಜಿಲ್ಲಾಧಿಕಾರಿಗಳಿಲ್ಲ. ಜಿಲ್ಲಾಧಿಕಾರಿಗಳ ಕಛೇರಿ ಸ್ಥಗಿತ ಆಗಿದೆ. ಹೊಸ ಜಿಲ್ಲಾಧಿಕಾರಿಗಳ ನೇಮಕಾತಿ ಯಾವಾಗ ಮಾಡುತ್ತೀರಿ?

ಅಧ್ಯಕ್ಷರು: ಕಳುಹಿಸಿಕೊಡೋಣ ಬೇರೆ ಜಿಲ್ಲಾಧಿಕಾರಿಗಳನ್ನು. ಕಳುಹಿಸಿಕೊಡಿ ಬಚ್ಚೇಗೌಡರೇ. ಅವರು ಪವರ್‌ಫುಲ್ ಮಿನಿಸ್ಟರ್. ಅವರು ಅರೇಂಜ್ ಮಾಡುತ್ತಾರೆ.

ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟಕುಸಿತ

8 (32)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ತೀರಾ ಕುಸಿದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ. ಬಂದಿದ್ದಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ. ಹೌದು.

ಆ. ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಪ್ರಯೋಗಾತ್ಮಕವಾಗಿ ಕೃತಕ ಅಂತರ್ಜಲ ಮರುಪೂರೈಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈಗಾಗಲೇ ಅಂತಹ ರಚನೆಗಳನ್ನು ಕೋಲಾರ ಮತ್ತು ಮಾಲೂರು ತಾಲ್ಲೂಕುಗಳಲ್ಲಿ ನಿರ್ಮಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿ ಅಂತರ್ಜಲ ಕೃತಕ ಮರುಪೂರೈಕೆಯ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯವು ಪ್ರಗತಿಯಲ್ಲಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.